# ಟೆಕ್ಸಸ್ ಕನ್ನಡಿಗರ ಆಶ್ರಯದಲ್ಲಿ
# ಕನ್ನಡ ಸಾಹಿತ್ಯ ರಂಗದ
# ಆರನೇ ವಸಂತ ಸಾಹಿತ್ಯೋತ್ಸವ

ಹ್ಯೂಸ್ಟನ್, ಮೇ ೧೮-೧೯, ೨೦೧೩

ಅಮೆರಿಕದ ಏಕೈಕ ರಾಷ್ಟ್ರೀಯ ಕನ್ನಡ ಸಾಹಿತ್ಯ ಸಂಸ್ಥೆಯಾದ **ಕನ್ನಡ ಸಾಹಿತ್ಯ ರಂಗದ (ಕಸಾರಂ)** ೬ನೇ ವಸಂತ ಸಾಹಿತ್ಯೋತ್ಸವ ಇದೇ ಮೇ ೧೮-೧೯, ೨೦೧೩ ರಂದು **ಟೆಕ್ಸಸ್ ಕನ್ನಡಿಗರ** ಆಶ್ರಯದಲ್ಲಿ ಹ್ಯೂಸ್ಟನ್ನಿನಲ್ಲಿ ನಡೆಯುತ್ತಿದೆ. ಈ ಸಂಘಟನೆಯಲ್ಲಿ ಸುಪ್ರಸಿದ್ಧ ಸ್ಥಳೀಯ ಕನ್ನಡ ಸಂಸ್ಥೆಯಾದ **ಹ್ಯೂಸ್ಟನ್ ಕನ್ನಡ ವೃಂದ** ಸಹಪ್ರವರ್ತಕ ಪಾತ್ರ ವಹಿಸಿದೆ. ಇದಲ್ಲದೆ, ಟೆಕ್ಸಸ್ ರಾಜ್ಯದ ಇತರ ಹೆಸರಾಂತ ಕನ್ನಡ ಸಂಸ್ಥೆಗಳಾದ **ಆಸ್ಟಿನ್ ಕನ್ನಡ ಕೂಟ, ಸ್ಯಾನ್ ಆಂಟೋನಿಯಾದ ಕುವೆಂಪು ಕನ್ನಡ ಕೂಟ, ಡಲ್ಲಾಸ್‌ನ ಮಲ್ಲಿಗೆ ಕನ್ನಡ ಕೂಟ, ಮತ್ತು ರಿಯೋ ಗ್ರ್ಯಾಂಡ್ ವ್ಯಾಲಿಯ ಕನ್ನಡ ಕೂಟ** – ಇವುಗಳು ಈ ಸಮ್ಮೇಳನಕ್ಕೆ ತಮ್ಮ ಉದಾರವಾದ ಸಹಕಾರ ನೀಡಿವೆ.  ರೈಸ್ ಯೂನಿವರ್ಸಿಟಿಯ ಹ್ಯಾಮನ್ ಹಾಲ್ ಸಭಾಂಗಣದಲ್ಲಿ ಶನಿವಾರ ಬೆಳಿಗ್ಗೆಯಿಂದ ಭಾನುವಾರ ಮಧ್ಯಾಹ್ನದವರೆಗೆ ನಡೆಯುವ ಈ ಸಮ್ಮೇಳನಕ್ಕೆ ಅಮೆರಿಕದ ಎಲ್ಲ ಸಾಹಿತ್ಯಾಸಕ್ತ ಕನ್ನಡಿಗರಿಗೂ ಮತ್ತಿತರರಿಗೂ ಸುಸ್ವಾಗತ!

ಕಸಾರಂ ನಡೆಸುವ ವಸಂತ ಸಾಹಿತ್ಯೋತ್ಸವಗಳು ತಮ್ಮ ವೈಶಿಷ್ಟ್ಯಪೂರ್ಣ ಸಾಹಿತ್ಯ ಕಾರ್ಯಕ್ರಮಗಳಿಗೆ, ಗಂಭೀರ ಸಾಹಿತ್ಯ ಚರ್ಚೆ ಮತ್ತು ಆಸ್ವಾದನೆಗೆ ಹೆಸರಾಗಿವೆ. ಅಮೆರಿಕದ ಕನ್ನಡ ಲೇಖಕರಿಗೆ ಒಂದು ಮೌಲಿಕವಾದ ವೇದಿಕೆಯನ್ನು ನಿರ್ಮಿಸಿವೆ. ಸಾಹಿತ್ಯ ಚಿಂತನೆಗೆ ಅವಶ್ಯಕವಾದ ಒಂದು ನೆಮ್ಮದಿಯ, ಸಹೃದಯ ಹಾಗೂ ಶಿಸ್ತಿನ ವಾತಾವರಣ ಕಲ್ಪಿಸುವುದರಲ್ಲಿ ಯಶಸ್ವಿಯಾಗಿವೆ. ಈ ವಿಶಿಷ್ಟ ಸಮ್ಮೇಳನ ಈ ಹಿಂದೆ ಫಿಲಡೆಲ್ಫಿಯ, ಲಾಸ್ ಏಂಜಲಿಸ್, ಚಿಕಾಗೋ, ವಾಷಿಂಗ್ಟನ್ ಮತ್ತು ಸಾನ್‌ಫ್ರಾನ್ಸಿಸ್ಕೋಗಳಲ್ಲಿ ಯಶಸ್ವಿಯಾಗಿ ನಡೆದು ಈಗ ಹ್ಯೂಸ್ಟನ್ನಿಗೆ  ಬರುತ್ತಿದೆ. ಸಾಹಿತ್ಯಕ್ಕೇ ಮೀಸಲಾದ ಈ ಸಮ್ಮೇಳನ ಒಂದು ಅಪೂರ್ವ ಸಂದರ್ಭ. ಇದನ್ನು ತಪ್ಪಿಸಿಕೊಳ್ಳಬೇಡಿ.   ಟೆಕ್ಸಸ್‌ನ ಕನ್ನಡಿಗರೆಲ್ಲರೂ ಸೇರಿ ಇದನ್ನು ಪ್ರೀತಿಪೂರ್ವಕವಾಗಿ ಬರಮಾಡಿಕೊಳ್ಳುತ್ತಿರುವುದು ಒಂದು ಗಮನಾರ್ಹ ಸಂಗತಿ. ಅವರೆಲ್ಲರಿಗೂ ಕಸಾರಂ ತನ್ನ ಕೃತಜ್ಞತೆ ಸಲ್ಲಿಸುತ್ತದೆ.

ಈ ಸಮ್ಮೇಳನಕ್ಕೆ ಮುಖ್ಯ ಅತಿಥಿಯಾಗಿ ಪ್ರಸ್ತುತ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಪಾಂಡಿತ್ಯ ಹಾಗೂ ಸೃಜನಶೀಲ ಕೃತಿಗಳಿಗೆ ಹೆಸರಾಗಿರುವ, ಭಾಷಾವಿಜ್ಞಾನಿ, ಅಂಕಣಕಾರ  ಪ್ರೊ. ಕೆ.ವಿ. ತಿರುಮಲೇಶ್ ಬರಲು ಒಪ್ಪಿದ್ದಾರೆ.  ಪ್ರೊ. ತಿರುಮಲೇಶ್ ಅವರು ಹೈದರಾಬಾದಿನಲ್ಲಿರುವ ಕೇಂದ್ರ ಇಂಗ್ಲಿಷ್ ಮತ್ತು ಇತರ ವಿದೇಶೀ ಭಾಷಾ ಸಂಸ್ಥೆಯಲ್ಲಿ (Central Institute for English and Foreign Languages) ಪ್ರಾಧ್ಯಾಪಕರಾಗಿದ್ದು ಈಗ ನಿವೃತ್ತರಾಗಿದ್ದಾರೆ.

ನಮ್ಮ ಕಾರ್ಯಕ್ರಮಗಳಲ್ಲಿ ಮುಖ್ಯ ಅತಿಥಿಗಳ ಭಾಷಣ, ಅವರೊಡನೆ ಸಂವಾದ, ಕಳೆದ ಎರಡು ವರ್ಷದಲ್ಲಿ ಪ್ರಕಟವಾಗಿರುವ ಅಮೆರಿಕದ ಕನ್ನಡ ಲೇಖಕರ ಕೃತಿಗಳ ಪರಿಚಯ, ಕವಿಗೋಷ್ಠಿ, ಪುಸ್ತಕ ಬಿಡುಗಡೆ, ಇಲ್ಲಿ

ಕನ್ನಡ ಕಲಿಯುತ್ತಿರುವ ಮಕ್ಕಳ ಕಾರ್ಯಕ್ರಮ – ಮುಂತಾದ ವಿವಿಧ ವಿಚಾರಶೀಲ ಹಾಗೂ ಉಪಯುಕ್ತ ಕಲಾಪಗಳನ್ನು ನಿಯೋಜಿಸಲಾಗಿದೆ. ಈ ಕಾರ್ಯಕ್ರಮ ವಿವರಗಳನ್ನು ಮುಂದೆ ಪ್ರಕಟಿಸುತ್ತೇವೆ.

ಪ್ರತಿ ಸಮ್ಮೇಳನದಲ್ಲೂ ಕನ್ನಡ ಸಾಹಿತ್ಯ ರಂಗ ಇಲ್ಲಿನ ಕನ್ನಡಿಗರೇ ಬರೆದ ಲೇಖನಗಳನ್ನೊಳಗೊಂಡ ಒಂದು ಪುಸ್ತಕವನ್ನು ಹೊರತಂದಿದೆ. ಅಂತೆಯೇ ಈ ಸಲವೂ ಒಂದು ಅಮೂಲ್ಯವಾದ ಪುಸ್ತಕವನ್ನು ಪ್ರಕಟಿಸುತ್ತಿದೆ. ಇದರ ಮುಖ್ಯ ವಸ್ತು 'ಅಮೆರಿಕದಲ್ಲಿ ನಮ್ಮ ಬದುಕು.' ಗುರುಪ್ರಸಾದ ಕಾಗಿನೆಲೆ, ಜ್ಯೋತಿ ಮಹಾದೇವ ಮತ್ತು ತ್ರಿವೇಣಿ ಶ್ರೀನಿವಾಸರಾವ್ ಅವರ ಸಂಪಾದಕತ್ವದಲ್ಲಿ ಸಿದ್ಧವಾಗುತ್ತಿರುವ ಈ ಕೃತಿಯಲ್ಲಿ ಅಮೆರಿಕದಲ್ಲಿ ನೆಲೆನಿಂತ ಕನ್ನಡಿಗರು ತಮ್ಮ ಅನುಭವ ಅನಿಸಿಕೆಗಳನ್ನು ಹೊರತೆಗೆದಿಟ್ಟಿದ್ದಾರೆ. ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಕನ್ನಡಿಗರ ಈ ಸ್ವಂತ ಅನುಭವಗಳ, ಒಳನೋಟಗಳ  ದಾಖಲೆ ಕನ್ನಡ ಸಾಹಿತ್ಯಕ್ಕೆ ಒಂದು ಉಪಯುಕ್ತ ಕಾಣಿಕೆ ಎಂಬುದು ನಮ್ಮ ನಂಬಿಕೆ. ಇಂಥ ಪುಸ್ತಕ ಇದುವರೆಗೆ ಹೊರಬಂದಿಲ್ಲ.

ಇದಲ್ಲದೆ, ಹ್ಯೂಸ್ಟನ್ ಕನ್ನಡ ವೃಂದ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿದ ಭಾರತದ ಹಿರಿಯ ಲೇಖಕ, ತತ್ವಜ್ಞಾನಿ, ರಾಜಾರಾಯರ ಇದುವರೆಗೆ ಅಲಭ್ಯವಾಗಿದ್ದ ಕನ್ನಡ ಕಾದಂಬರಿ 'ನಾರೀಗೀತ'ವನ್ನು ಲೋಕಾರ್ಪಣೆ ಮಾಡುತ್ತಿದೆ. ಇದು ಒಂದು ಅಪರೂಪದ, ಮಹತ್ವದ ಸಂದರ್ಭ. (ರಾಜಾರಾಯರು ೧೯೬೬–೮೩ರಲ್ಲಿ ಅಮೆರಿಕದ ಯೂನಿವರ್ಸಿಟಿ ಆಫ್ ಟೆಕ್ಸಸ್, ಆಸ್ಟಿನ್‌ನಲ್ಲಿ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದು ೨೦೦೬ರಲ್ಲಿ ತೀರಿಹೋದರು ಎಂಬುದನ್ನು ಇಲ್ಲಿ ನೆನೆಯಬಹುದು.)

ಅಮೆರಿಕದ ಅನೇಕ ಕನ್ನಡ ಲೇಖಕರನ್ನು, ಅವರ ಕೃತಿಗಳನ್ನು ಈ ಸಮ್ಮೇಳನಗಳಲ್ಲಿ ಜನಕ್ಕೆ ಪರಿಚಯಿಸುವ ಅವಕಾಶ ಒದಗಿರುವುದು ನಮಗೆ ಹೆಮ್ಮೆ ತಂದಿರುವ ವಿಷಯ. ತಮ್ಮ ಹೊಸ ಪುಸ್ತಕಗಳನ್ನು ಇಲ್ಲಿ ಬಿಡುಗಡೆ ಮಾಡುವ ಅವಕಾಶವುಂಟು ಎಂದು ನಮ್ಮ ಲೇಖಕರಿಗೆ ತಿಳಿಸಬಯಸುತ್ತೇವೆ. ನಮ್ಮ ಲೇಖಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಅವಕಾಶವನ್ನು ಬಳಸಿಕೊಳ್ಳಬೇಕೆಂದೂ, 'ನಮ್ಮ ಬರಹಗಾರರು,' 'ಕವಿಗೋಷ್ಠಿ' ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದೂ ಕೋರುತ್ತೇವೆ.

ಇಲ್ಲಿನ ಬರಹಗಾರರ ಪುಸ್ತಕಗಳನ್ನು ಕೊಳ್ಳಲು ಈ ದೇಶದಲ್ಲಿ ಅಷ್ಟು ಅನುಕೂಲಗಳಿಲ್ಲ. ಆ ಕೊರತೆಯನ್ನು ನೀಗಲು ಪ್ರತಿ ಸಮ್ಮೇಳನದಲ್ಲೂ ಒಂದು ಪುಸ್ತಕ ಮಳಿಗೆಯನ್ನು ನಡೆಸುತ್ತೇವೆ. ಲೇಖಕರು ತಮ್ಮ ಪುಸ್ತಕಗಳನ್ನು ಇಲ್ಲಿ ಮಾರಾಟಮಾಡಬಹುದು. ಅದರ ಬಗ್ಗೆ ವಿವರಗಳಿಗೆ ಕಸಾರಂ ಅನ್ನು ಸಂಪರ್ಕ ಮಾಡಬೇಕೆಂದು ಕೋರುತ್ತೇವೆ.  ಕಳೆದ ಬಾರಿ ಎರಡು ಸಾವಿರ ಡಾಲರಿನಷ್ಟು ಬೆಲೆಯ ಪುಸ್ತಕಗಳು ಮಾರಾಟವಾದವು.

ಗಂಭೀರವಾದ ಸಾಹಿತ್ಯ ಸಂವಾದ, ಭಾಷಣಗಳೇ ಅಲ್ಲದೆ ಈ ಸಮ್ಮೇಳನದಲ್ಲಿ ಉನ್ನತ ಮಟ್ಟದ ಸಾಹಿತ್ಯಾತ್ಮಕ ಮನರಂಜನೆಯ ಕಾರ್ಯಕ್ರಮಗಳೂ ಇರುತ್ತವೆ. ಹ್ಯೂಸ್ಟನ್ ಕನ್ನಡ ವೃಂದ ಈ ಮನರಂಜನೆಯ ಕಾರ್ಯಕ್ರಮವನ್ನು ಸಿದ್ಧಗೊಳಿಸುತ್ತಿದೆ. ಒಳ್ಳೆಯ ಸೊಗಸಾದ ಊಟತಿಂಡಿಗಳು, ಪಾನೀಯಗಳು ಯತೇಚ್ಛವಾಗಿ ದೊರೆಯುತ್ತವೆ.

ಈ ಸಮ್ಮೇಳನದ ಕಾರ್ಯನಿರ್ವಹಣೆಗಾಗಿ ರಚಿಸಿರುವ ವಿಶೇಷ ಸಮಿತಿಯಲ್ಲಿ ಕಸಾರಂ ಕಾರ್ಯಕಾರೀ ಸಮಿತಿಯ ಅಧ್ಯಕ್ಷ ಎಂ.ಎಸ್. ನಟರಾಜ, ಆಡಳಿತ ಮಂಡಳಿಯ ಅಧ್ಯಕ್ಷ ಎಚ್.ವೈ. ರಾಜಗೋಪಾಲ್, ಮತ್ತು

ಹ್ಯೂಸ್ಟನ್ ಕನ್ನಡ ವೃಂದದ ಅಧ್ಯಕ್ಷ ಎನ್. ಎಸ್. ವತ್ಸಕುಮಾರ್, ಮತ್ತು ಉಭಯ ಸಂಘಗಳ ಪದಾಧಿಕಾರಿಗಳು ಈಗಾಗಲೆ ಹಲವಾರು ತಿಂಗಳಿಂದ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ. ಕಾರ್ಯಕ್ರಮ, ನೋಂದಣಿ, ವಸತಿ ಇತ್ಯಾದಿ ವಿವರಗಳು ಸಿದ್ಧವಾಗುತ್ತಿವೆ. ಅವು ದೊರೆತಂತೆಲ್ಲ ಅವನ್ನು ನಮ್ಮ ಸಾಹಿತ್ಯಾಸಕ್ತ ಬಳಗಕ್ಕೆ ಇದೇ ತಾಣದಲ್ಲಿ ಹಾಗೂ ಕಸಾರಂ ಮತ್ತು ನಮ್ಮ ಜೊತೆಗೂಡಿರುವ ಟೆಕ್ಸಸ್ ಕನ್ನಡ ಕೂಟಗಳ ತಾಣಗಳಲ್ಲಿ ತಿಳಿಯಪಡಿಸುತ್ತೇವೆ. ದಯವಿಟ್ಟು ಅವನ್ನು ಗಮನಿಸಿ.

ಮತ್ತೊಮ್ಮೆ ಎಲ್ಲರಿಗೂ ಆದರದ ಸ್ವಾಗತ. ಈ ಅಪೂರ್ವ ಸಮ್ಮೇಳನದಲ್ಲಿ ಭಾಗವಹಿಸುವ ಸದವಕಾಶವನ್ನು ತಪ್ಪಿಸಿಕೊಳ್ಳಬೇಡಿ.

ಸಂಪರ್ಕ: ಮೈ.ಶ್ರೀ. ನಟರಾಜ (301-424-4305); ಎಚ್.ವೈ. ರಾಜಗೋಪಾಲ್ (610-608-4606), ಎನ್. ಎಸ್. ವತ್ಸಕುಮಾರ್ (979-240-9496)

ತಾಣಗಳು: <www.kannadasahityaranga.org>, <www. kannadavrinda.org>